ನಿಯಮ ೩೩ಳಿರ ಮೇರೆಗೆ

ವೀರ ರಾವಣನ ಚರಿತ ಪುಸ್ತಕವನ್ನು ಖರೀದಿ ಮಾಡುವುದಕ್ಕೆ ಒತ್ತಾಯ

ಶ್ರೀಮತಿ ಸುಮಾ ವಸಂತ,—ಸಗಟು ಪುಸ್ತಕ ಖರೀದಿ ಮಾಡುವ ಸರ್ಕಾರ ಯಾವ ಮಾನದಂಡವನ್ನು ಅನುಸರಿಸುತ್ತಿದೆಯೋ ದೇವರೇ ಬಲ್ಲ. ರಾಜ್ಯದ ಎಲ್ಲ ಜಿಲ್ಲೆಗಳ ಲೇಖಕರ ಪುಸ್ತಕಗಳನ್ನೂ ಖರೀದಿಸಿ ಪ್ರೋತ್ಸಾಹ ನೀಡುವುದು ಅವಶ್ಯ. ಲೇಖಕರಾಗಿ: ಪ್ರಕಾಶಕರಾಗಿ, ಮನೆ ಮನೆಗೆ. ಊರಿಂದ ಊರಿಗೆ ಕಾಲ್ನಡಿಗೆಯಲ್ಲಿ ಪಯಣಿಸಿ: ಪುಸ್ತಕ ಮಾರಿ ಕನ್ನಡ ತಾಯಿಯ ಸೇವೆ ಮಾಡುವ 'ಕವಿಭಕ್ತ' ಎಂಬ ಲೇಖಕರು ತನ್ನ ಕೃತಿ 'ವೀರರಾವಣ ಚರಿತ' ಪುಸ್ತಕದ ಸಗಟು ಖರೀದಿಗೆ ಮನವಿ ಸಲ್ಲಿಸಿದರೂ ಅದಕ್ಕೆ ಬೆಲೆ ಕೊಟ್ಟಿಲ್ಲ. ಬದಲಿಗೆ ದೊಡ್ಡ ದೊಡ್ಡ ಪ್ರಕಾಶನ ಸಂಸ್ಥೆಗಳ ಪುಸ್ತಕಗಳಿಗೇ ಬೇಡಿಕೆ ಸಲ್ಲಿಸಲಾಗುತ್ತಿರುವುದು ತೀರ ಆಶ್ಚರ್ಯ. ಪ್ರಕಾಶನ ಸಂಸ್ಥೆಗಳ ಮುಖ ನೋಡದೆ, ಕೃತಿ ಮೌಲ್ಯ ನೋಡಿ ಖರೀದಿಸುವಂತಾಗಬೇಕು. ಈ ಲೇಖಕರ ಕೃತಿ ಕೊಂಡು ನೆರವು ನೀಡಬೇಕು. ಈಗ ಆದ ಅನ್ಯಾಯ ಸರಿಪಡಿಸಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯಮಂತ್ರಿ).—ಇದಕ್ಕೆ ಮಾಹಿತಿ ತರಿಸಿಕೊಡುತ್ತೇನೆ.

(ಶ್ರೀ ನೀಲಕಂಠಪ್ಪ ಮತ್ತು ಕೆ. ಎಚ್. ಪಾಟೀಲರು ಹಾಜರಿರಲಿಲ್ಲ).

೩) ಬಿಜಾಪುರ ತಹಸೀಲ್ದಾರರವರು ಕಂದಾಯ ವಸೂಲಾತಿಯಲ್ಲಿ ಬಲತ್ಕಾರ ಮಾಡಿ ರೈತರಿಗೆ ತೊಂದರೆಯಾಗಿರುವುದು.

ಶ್ರೀ ಆರ್. ವೆಂಕಟರಾವಯ್ಯ.—ಮಾನ್ಯ ಅಧ್ಯಕ್ಷರೇ ವಿಜಾಪುರ ಜಿಲ್ಲೆಯ, ವಿಜಾಪುರ ತಹಸಿಲ್ದಾರ್‌ರವರು ೨೬.೪.೮೮ ರಂದು ರಾತ್ರಿ ೮ ಗಂಟೆಗೆ ಬೇರೆ ಯಾವ ರೈತನದೋ ಕಂದಾಯ ಬಾಕಿ ವಸೂಲಾಗಬೇಕೆಂದು ಎಂ. ಎಂ. ಗಿರಿಗಾಂವ, ಶಾಹಾ ಪೇಟೆ ಓಣಿ: ಬಿಜಾಪುರ ೫೮೬೧೧೧ ರವರ ಮನೆಗೆ ತನ್ನ ಸಿಬ್ಬಂದಿಯೊಡನೆ ನುಗ್ಗಿ ಮನೆಯಲ್ಲಿದ್ದ ಹೆಣ್ಣುಮಕ್ಕಳನ್ನು ಬೆದರಿಸಿ ಮನೆ ಮಾಲೀಕ ಇಲ್ಲದಿದ್ದಾಗ ನುಗ್ಗಿ ಬಲಾತ್ಕಾರವಾಗಿ ಒಂದು ತೊಲ ಬಂಗಾರದ ಆಭರಣ ಬೋರಮಳಿ ಹಾಗೂ ೬ ರೂಪಾಯಿ ತೆಗೆದುಕೊಂಡು ಹೋಗಿದ್ದಾರೆ, ಲೂಟಿ ಮಾಡಿದ್ದಾರೆ. ಈ ಬಗ್ಗೆ ದಿನಾಂಕ ೨೮.೪.೮೮ ರಂದು ಮಾನ್ಯ ರೆವಿನ್ಯೂ ಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ೨೬.೪.೮೮ ರಂದು ಪೋಲೀಸ್ ಕಂಪ್ಲೇಂಟ್ ಕೊಟ್ಟು ಗಾಂಧಿ ಚೌಕದ ಪೋಲೀಸ್ ಠಾಣೆಯಲ್ಲಿ ಸಿ. ಆರ್. ನಂ. ೧೫೮.೮೮ (ಅಂಡರ್ ಸೆಕ್ಷನ್ ೯೯ ಐಪಿಸಿ) ರಿಜಿಸ್ಟರ್ ಆಗಿದೆ. ಇಂತಹ ಅನೇಕ ಘಟನೆಗಳನ್ನು ಈ ತಹಸಿಲ್ದಾರ್ ನಡಸಿ ಜನತೆ ರೊಚ್ಚಿಗೆದ್ದು ಡಿವೈಎಸ್‌ಐನವರು ಧರಣಿ ಮಾಡುತ್ತಿದ್ದಾರೆ. ಈ ಬಗ್ಗೆ ಈ ಅಧಿಕಾರಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಕಂದಾಯ ಇಲಾಖೆ ಮಂತ್ರಿಗಳ ಹೇಳಿಕೆಯನ್ನು ಕೇಳುತ್ತೇನೆ.?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಈ ಬಗ್ಗೆ ಮಾನ್ಯ ವೆಂಕಟರಾವಯ್ಯನವರು ಸರ್ಕಾರದ ಗಮನ ಸೆಳೆದಿದ್ದಾರೆ. ಬೇರೆಯವರ ಸಲುವಾಗಿಯೂ ಸಹಾ ಅವರು ಒತ್ತಾಯ ಮಾಡಬಾರದು. ಈ ಬಗ್ಗೆ ವಿವರವನ್ನು ತರಿಸಿ ನಾನು ಎನ್‌ಕ್ವಯರಿ ಮಾಡಿಸುತ್ತೇನೆ. ಮತ್ತು ಅವರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತೇನೆ.

೩) ಬೆಳಗಾವಿ ನಗರದ ಮಹಾಂತೇಶ ನಗರಕ್ಕೆ ಹೋಗುವ ದಾರಿಯಲ್ಲಿ ಹೆಚ್ಚು ಅಪಘಾತಗಳಿಂ ಸಂಭವಿಸುವುದರಿಂದ ಅಲ್ಲಿ ಓವರ್ ಬ್ರಿಡ್ಜ್ ಕಟ್ಟುವ ಬಗ್ಗೆ

ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ನಗರದ ಮಹಾಂತೇಶ ನಗರದ ಮಹಾಂತೇಶನಗರ ಬಡಾವಣೆಗೆ ಹೋಗುವ ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಯ ಮೇಲೆ ಮೇಲಿಂದ ಮೇಲೆ ಅಪಘಾತಗಳು ಆಗುವುದು ಜನರ ದುಃಖಕ್ಕೆ ಕಾರಣವಾಗಿದೆ.

ಮಹಾಂತೇಶನಗರ ಬಡಾವಣೆಗೆ ಹೋಗುವ ದಾರಿಯಲ್ಲಿ ಮೇಲೆ ಓವರ್ ಬ್ರಿಡ್ಜ್ ಕಟ್ಟುವಂತೆ ಲೋಕೋಪಯೋಗಿ ಮಂತ್ರಿಗಳಿಗೆ ಬರೆದಿರುವ ಪತ್ರಕ್ಕೆ ಆದಷ್ಟು ಶೀಘ್ರವಾಗಿ ಬರುವ ವರ್ಷದಲ್ಲಿ ಈ ಕಾರ್ಯವನ್ನು ಪ್ರಾರಂಭಿಸುವುದಾಗಿ ಪತ್ರ ಮುಖೇನ ತಿಳಿಸಿರುತ್ತಾರೆ.

ಚಿಕ್ಕಮ್ಮಕಳು ಹಾಗೂ ಸಾರ್ವಜನಿಕರು ಜೀವವನ್ನು ಮುಟ್ಟಿಗೆಯಲ್ಲಿ ಹಿಡಿದುಕೊಂಡು ಈ ರಸ್ತೆಯನ್ನು ದಾಟಬೇಕಾಗುತ್ತದೆ. ಮಹಾಂತೇಶನಗರ ಓವರ್ ಬ್ರಿಡ್ಜ್ ಮಾಡುವಂತೆ ಸರಕಾರವನ್ನು ಒತ್ತಾಯಿಸುತ್ತಾ, ಈ ವಿಷಯದಲ್ಲಿ ಲೋಕೋಪಯೋಗಿ ಮಂತ್ರಿಗಳು ಸದನದಲ್ಲಿ ಹೇಳಿಕೆ ನೀಡುವಂತೆ ಒತ್ತಾಯಿಸುತ್ತೇನೆ

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳ ಗಮನಕ್ಕೆ ತಂದು ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ,

4) ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರ್ಕಾರಿ ಶಾಲಾ ಶಿಕ್ಷಕರಿಗೆ ಕೊಡುತ್ತಿರುವ ಸೌಲಭ್ಯಗಳನ್ನು ಕೊಡದಿರುವುದು

ಶ್ರೀ ಬಿ. ಎಂ. ಇದಿನಬ್ಬ.— ಮಾನ್ಯ ಅಧ್ಯಕ್ಷರೇ, ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸರಕಾರಿ ಶಾಲಾ ಶಿಕ್ಷಕರಿಗೆ ದೊರಕುವ ಅನೇಕ ಸೌಲಭ್ಯಗಳು ಇನ್ನೂ ದೊರಕುತ್ತಿಲ್ಲ. ಮುಖ್ಯವಾಗಿ ಹೈದರಾಬಾದ್ ವೇತನ ಶ್ರೇಣಿ ಗ್ರಾಚ್ಯುಯಿಟಿಗೆ ಸಂಪೂರ್ಣ ಸರ್ವಿಸ್ ಗಣನೆ, ಆಗಾಗ ವೇತನಕ್ಕೆ ಅಲಾಟ್‌ಮೆಂಟಿನ ಕೊರತೆ, ವೈದ್ಯಕೀಯ ಸೌಲಭ್ಯ, ಎಲ್‌ಟಿಸಿ ಸೌಲಭ್ಯ, ವಸತಿ ನಿರ್ಮಾಣಕ್ಕೆ ಸರಕಾರದ ಸಾಲದ ನೆರವು, ಗ್ರೂಪ್ ಇನ್ಸೂರೆನ್ಸ್‌ನಲ್ಲಿ ವ್ಯತ್ಯಾಸ, ಅನುಕಂಪದ ನೆಲೆಯಲ್ಲಿ ನೇಮಕಾತಿ ಮೊದಲಾದ ಸೌಲಭ್ಯಗಳಿಂದ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರು ವಂಚಿತರಾಗಿರುತ್ತಾರೆ. ಸಮಾನ ಕೆಲಸಕ್ಕೆ ಸಮಾನ ಸೌಲಭ್ಯ ಎಂಬ ಬೆಲೆಯಲ್ಲಿ ದ.ಕ. ಜಿಲ್ಲಾ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘವು ಸೌಲಭ್ಯಗಳನ್ನು ಪಡೆಯುವುದಕ್ಕಾಗಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದೆ. ಆದರೂ ಸರಕಾರ ಇನ್ನೂ ಗಮನಿಸಿಲ್ಲ. ಆದ ಕಾರಣ ಅವರು ನೇರ ದಾರಿ ಕಾರ್ಯಕ್ರಮಕ್ಕೆ ಇಳಿದಿದ್ದಾರೆ. ಈ ಕುರಿತು ಪ್ರಾಥಮಿಕ ಶಿಕ್ಷಣ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ಸೋಮಶೇಖರ್.— ಅಧ್ಯಕ್ಷರೇ, ಮಾನ್ಯ ಸದಸ್ಯರ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ಕೊಡಬಯಸುತ್ತೇನೆ.

ಹೈದ್ರಾಬಾದ್ ವೇತನ ಶ್ರೇಣಿ ಸೌಲಭ್ಯದ ಬಗ್ಗೆ ರಾಷ್ಟ್ರದ ಪರಮೋಚ್ಚ ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ರಿಟ್ ಅರ್ಜಿದಾರರಿಗೂ ಹಾಗೂ ಪ್ರತಿವಾದಿಗಳಾದ ರಾಜ್ಯ ಸರ್ಕಾರ ಹಾಗೂ ಇತರರ ನಡುವೆ ಆದ ರಾಜಿ ಸೂತ್ರದಂತೆ ಸರ್ಕಾರವು ಆದೇಶ ಸಂಖ್ಯೆ ಇಡಿ ೭ ಪಿಡಬ್ಲ್ಯೂಲಿ ದಿ. ೧೦-೮-೭೯ರಲ್ಲಿ ಸೌಲಭ್ಯವನ್ನು ರಿಟ್ ಅರ್ಜಿದಾರರಿಗೂ ಅವರುಗಳಂತೆ ಇರುವ ಇತರೆ ಶಿಕ್ಷಕರಿಗೂ ವಿಸ್ತರಿಸಿ ಆದೇಶವನ್ನು ಹೊರಡಿಸಿತ್ತು.

ಸರ್ವೋಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿದಾರರ ಹಾಗೂ ಪ್ರತಿವಾದಿಗಳ ನಡುವೆ ಆದ ರಾಜಿ ಸೂತ್ರದಲ್ಲಿ ಅಡಕವಾಗಿರುವ ಅಂಶಗಳ ರೀತ್ಯ ರಿಟ್ ಅರ್ಜಿದಾರರೆಲ್ಲರೂ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾದ ಕಾರಣ ಈ ಸೌಲಭ್ಯವನ್ನು ಸದರಿ ರಿಟ್ ಅರ್ಜಿದಾರರಿಗೂ ಹಾಗೂ ಅವರಂತೆಯೇ ಇರುವ ಇತರೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಅಷ್ಟೇ ವಿಸ್ತರಿಸಲಾಯಿತು.

ರಾಜ್ಯ ಸರ್ಕಾರವು ತನ್ನ ವಿವಿಧ ದಿನಾಂಕಗಳ ಆದೇಶಗಳಲ್ಲಿ ದಿನಾಂಕ ೩೧-೧೨-೬೯ರೊಳಗೆ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ನೇಮಕಗೊಂಡಂತಹ ಎಲ್ಲಾ ಸಾಮಾನ್ಯ ಹಾಗೂ ವಿಶೇಷ ಗುಂಪಿಗೆ ಸೇರಿದ ಹಾಗೂ ದಿನಾಂಕ ೧೩-೧೨-೬೯ರೊಳಗೆ ಸೇವೆಗೆ ಸೇರಿ ನಂತರ ಲಿಖಿಕ ನೌಕರರಾಗಿ ಹುದ್ದೆಯನ್ನು ಬದಲಾಯಿಸಿಕೊಂಡ ಶಿಕ್ಷಕರುಗಳಿಗೂ ದಿನಾಂಕ ೧೦-೮-೭೯ರ ಆದೇಶವನ್ನು ವಿಸ್ತರಿಸಿತು. ಆದ್ದರಿಂದ ಸರ್ವೋಚ್ಚ ನ್ಯಾಯಾಲಯದ ಮಧ್ಯಸ್ಥಿಕೆಯಲ್ಲಿ ಆದ ರಾಜಿ ಸೂತ್ರದ ರೀತ್ಯ ಖಾಸಗಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ವಿಸ್ತರಿಸುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ.